ಸರ್ಕಾರಿ ಪ್ರೌಢಶಾಲೆ ಕಟ್ಟೆಹಕ್ಕಲು ತೀರ್ಥಹಳ್ಳಿ ತಾಲ್ಲೂಕು

# ಪ್ರಥಮಭಾಷೆ ಕನ್ನಡ ವಿಷಯದ ಸಮಾಸಗಳ ಮಿಂಚು ಪಟ್ಟಿಗಳು.

ಸಮಾಸ ಪದದ ಅರ್ಥ ಸಮಸ್ತ ಪದ,ಇಡಿಯಾದ ಪದ

## *ಸಮಾಸ ನಿಯಮ

ಎರಡು ಅಥವಾ ಎರಡಕ್ಕಿಂತ ಹೆಚ್ಚು ಪದಗಳು ಅರ್ಥಕ್ಕನುಸಾರ ಒಟ್ಟು ಸೇರಿ ಪೂರ್ವ ಪದದ ಅಂತ್ಯದಲ್ಲಿ ವಿಭಕ್ತಿ ಪ್ರತ್ಯಯವಿದ್ದರೆ ಅದು ಲೋಪವಾಗಿ ಒಂದೇ ಪದವಾಗುವುದೇ ಸಮಾಸ.

ಹೀಗೆ ಸಮಾಸವಾಗುವಾಗ,ಕನ್ನಡ ಪದಗಳಿಗೆ ಕನ್ನಡ ಪದವೇ ಸೇರಬೇಕು.ಸಂಸ್ಕೃತ ಪದಕ್ಕೆ ಸಂಸ್ಕೃತ ಪದವೇ ಸೇರಬೇಕು.

*ಕನ್ನಡ ಪದಕ್ಕೆ ಸಂಸ್ಕೃತ ಪದಗಳನ್ನಾಗಲೀ ಅಥವಾ ಸಂಸ್ಕೃತ ಪದಕ್ಕೆ ಕನ್ನಡ ಪದಗಳನ್ನಾಗಲೀ ಸೇರಿಸಿ ಸಮಾಸ ಮಾಡಬಾರದು.

*ಕನ್ನಡ ಸಂಸ್ಕೃತ ಪದಗಳನ್ನು ಸೇರಿಸಿ ಸಮಾಸ ಮಾಡಿದರೆ ಅದು ಅರಿ ಸಮಾಸ ಎಂದು ಕರೆಯಲ್ಪಡುತ್ತದೆ.

ಪೂರ್ವಕವಿಗಳ ಪ್ರಯೋಗ,ಬಿರುದಾವಳಿಗಳು ಮತ್ತು ಗಮಕಸಮಾಸ ಕ್ರಿಯಾಸಮಾಸಗಳಲ್ಲಿ ಅರಿಸಮಾಸ ದೋಷವಿರುವುದಿಲ್ಲ.

*ಕನ್ನಡ ಭಾಷೆಯಲ್ಲಿ ಎಂಟು ಸಮಾಸಗಳಿವೆ.

1)ತತ್ಪುರುಷ ಸಮಾಸ

2)ಕರ್ಮಧಾರೆಯ ಸಮಾಸ

3)ದ್ವಿಗು ಸಮಾಸ

4)ಅಂಶಿ ಸಮಾಸ

5)ದ್ವಂದ್ವ ಸಮಾಸ

6)ಬಹುವ್ರೀಹಿ ಸಮಾಸ

7)ಕ್ರಿಯಾ ಸಮಾಸ

8)ಗಮಕ ಸಮಾಸ

ಸಮಾಸ ಪದ ಬಿಡಿಸಿ ಬರೆಯುವುದಕ್ಕೆ ವಿಗ್ರಹವಾಕ್ಯ ಅಥವಾ ವಿಗ್ರಹಿಸುವುದು ಎಂದು ಕರೆಯುತ್ತಾರೆ.

ಉದಾ:

ತೈಲದ+ಬಿಂದುಗಳು=ತೈಲಬಿಂದುಗಳು

1) ತತ್ಪುರುಷ ಸಮಾಸ:

ಪೂರ್ವ ಮತ್ತು ಉತ್ತರ ಪದಗಳು ನಾಮಪದಗಳಾಗಿದ್ದು,ಉತ್ತರಪದದ ಅರ್ಥ ಪ್ರಧಾನವಾಗಿರುವ ಸಮಾಸವೇ ತತ್ಪುರುಷ ಸಮಾಸ.(ಪೂರ್ವಪದದ ಅಂತ್ಯದಲ್ಲಿರುವ ವಿಭಕ್ತಿ ಪ್ರತ್ಯಯ ಲೋಪವಾಗುವುದು)

# ಉದಾಹರಣೆಗಳು

1.ಬೆಟ್ಟದ +ತಾವರೆ=ಬೆಟ್ಟದಾವರೆ

(ನಾಮಪದ+ನಾಮಪದ–ಉತ್ತರ ಪದದ

ಅರ್ಥ ಪ್ರಧಾನ)

2.ವಯಸ್ಸಿನಿಂದ + ವೃದ್ಧ =ವಯೋವೃದ್ಧ.

3.ಹಗಲಿನಲ್ಲಿ +ಕನಸು=ಹಗಲುಗನಸು

4.ತಲೆಯಲ್ಲಿ +ನೋವು =ತಲೆನೋವು.

5.ಅರಸನ +ಮನೆ=ಅರಮನೆ

6.ಸ್ವಾಮಿಗೆ +ದ್ರೋಹ =ಸ್ವಾಮಿದ್ರೋಹ

7.ಪೂವಿನ +ತೋಟ=ಪೂದೋಟ

8.ಮರದ +ಕಾಲು=ಮರಗಾಲು

## 2.ಕರ್ಮಧಾರೆಯ ಸಮಾಸ

*ಪೂರ್ವೋತ್ತರ ಪದಗಳು ಲಿಂಗ,ವಚನ,ವಿಭಕ್ತಿಗಳಿಂದ ಸಮಾನವಾಗಿದ್ದು ವಿಶೇಷಣ-ವಿಶೇಷ್ಯ ಸಂಬಂಧದಿಂದ ಕೂಡಿ ಆಗುವ ಸಮಾಸವೇ ಕರ್ಮಧಾರೆಯ ಸಮಾಸ.{ಉತ್ತರ ಪದದ ಅರ್ಥವೇ ಪ್ರಧಾನ}

### ಉದಾಹರಣೆಗಳು

1.ಹಿರಿದು + ಮರ=ಹೆಮ್ಮರ

(ವಿಶೇಷಣ +ವಿಶೇಷ್ಯ(ಉತ್ತರ ಪದ ಪ್ರಧಾನ)

2.ಮೆಲ್ಲಿತು +ನುಡಿ =ಮೆಲ್ನುಡಿ.

3.ದಿವ್ಯವಾದ + ಪ್ರಕಾಶ=ದಿವ್ಯಪ್ರಕಾಶ.

4.ಇನಿದು + ಮಾವು=ಇಮ್ಮಾವು

5.ಮೆಲ್ಲಿತು + ಮಾತು=ಮೆಲ್ವಾತು

6.ಹೊಸದು + ಕನ್ನಡ=ಹೊಸಗನ್ನಡ

7.ಕಡಿದು +ಏಕಾಂತ=ಕಟ್ಟೇಕಾಂತ

8.ಅತಿಯಾದ + ಕುಟಿಲ=ಅತಿಕುಟಿಲ

9.ನಲ್ಲಿತು +ಕುದುರೆ=ನಲ್ಗುದುರೆ

10.ದಿವ್ಯವಾದ +ಶರಾಳಿ=ದಿವ್ಯಶರಾಳಿ

11.ಬಿಳಿದು + ಕೊಡ=ಬೆಳ್ಗೊಡೆ

12.ಹಿರಿದಾದ + ದಾರಿ=ಹೆದ್ದಾರಿ

# ೩.ದ್ವಿಗು ಸಮಾಸ

ಪೂರ್ವಪದವು ಸಂಖ್ಯಾವಾಚಕವಾಗಿದ್ದು ಉತ್ತರ ಪದವು ನಾಮಪದವಾಗಿದ್ದರೆ ಅದುವೇ ದ್ವಿಗು ಸಮಾಸ.

## ಉದಾಹರಣೆಗಳು

1.ಮೂರು + ಮಡಿ=ಮುಮ್ಮಡಿ

(ಸಂಖ್ಯಾವಾಚಕ +ನಾಮಪದ)

2.ನಾಲ್ಕು+ದೆಸೆ =ನಾಲ್ದೆಸೆ

3.ಪಂಚಗಳಾದ + ಇಂದ್ರಿಯ=ಪಂಚೇಂದ್ರಿಯ

4.ಏಕ+ಅಕ್ಷರೀ=ಏಕಾಕ್ಷರೀ

5.ಪಂಚ+ಅಕ್ಷರೀ=ಪಂಚಾಕ್ಷರೀ

6.ಮೂರು + ಜಗ=ಮೂಜಗ

7.ಸಪ್ತ +ಅಕ್ಷರೀ=ಸಪ್ತಾಕ್ಷರೀ

8.ಮೂರು + ಗಾವುದ=ಮೂಗಾವುದ

9.ಸಪ್ತಗಳಾದ +ಸ್ವರಗಳು=ಸಪ್ತಸ್ವರಗಳು

10.ಎರಡು +ಮಡಿ=ಇಮ್ಮಡಿ

11.ನಾಲ್ಕು +ಮಡಿ =ನಾಲ್ವಡಿ

12.ಮೂರು +ಕಣ್ಣು =ಮುಕ್ಕಣ್ಣು

13.ಒಂದು +ಕಟ್ಟು=ಒಗ್ಗಟ್ಟು

14.ಚತುರ್ +ಮುಖ=ಚತುರ್ಮುಖ

15.ಒಂದು +ಮನ=ಒಮ್ಮನ

## 4.ಅಂಶಿ ಸಮಾಸ

ಪೂರ್ವೋತ್ತರ ಪದಗಳು ಅಂಶಅಂಶಿ ಭಾವ ಸಂಬಂಧದಿಂದ ಸೇರಿ ಪೂರ್ವಪದದ ಅರ್ಥ ಪ್ರಧಾನವಾಗುಳ್ಳ ಸಮಾಸವೇ ಅಂಶಿಸಮಾಸ. (ಅವ್ಯಯೀಭಾವ ಸಮಾಸ )

# ಉದಾಹರಣೆಗಳು

1.ಕೈಯ +ಅಡಿ=ಅಂಗೈ

(ಅಂಶಿ +ಅಂಶ)

2.ತಲೆಯ +ಹಿಂದು=ಹಿಂದಲೆ

3.ಕಣ್ಣ +ಕಡೆ=ಕಡೆಗಣ್ಣು

4.ತಲೆಯ +ಮುಂದು=ಮುಂದಲೆ

5.ಹುಬ್ಬಿನ +ಕೊನೆ=ಕೊನೆಹುಬ್ಬು

6.ಕಾಲಿನ+ಅಡಿ=ಅಂಗಾಲು

7.ಕಾರಿನ +ಮುಂದು=ಮುಂಗಾರು

8.ಕಾಣ್ಕೆಯ +ಮುಂದು=ಮುಂಗಾಣ್ಕೆ

## 5.ದ್ವಂದ್ವ ಸಮಾಸ

ಎರಡು ಅಥವಾ ಅನೇಕ ನಾಮಪದಗಳು ಸಹಯೋಗ ತೋರುವಂತೆ ಸೇರಿ ಎಲ್ಲಾ ಪದಗಳ ಅರ್ಥವೂ ಪ್ರಧಾನವಾಗಿರುವ ಸಮಾಸವೇ ದ್ವಂದ್ವ ಸಮಾಸ.

### ಉದಾಹರಣೆಗಳು

1.ಕೆರೆಯೂ + ಕಟ್ಟೆಯೂ +ಬಾವಿಯೂ=

ಕೆರೆಕಟ್ಟೆಬಾವಿಗಳು.

2.ಆನೆಯೂ +ಕುದುರೆಯೂ +ಒಂಟೆಯೂ=

ಆನೆಕುದುರೆಒಂಟೆಗಳು.

3.ಗಿಡವೂ +ಮರವೂ+ಬಳ್ಳಿಯೂ=

ಗಿಡಮರಬಳ್ಳಿಗಳು.

4.ಸೂರ್ಯನೂ+ಚಂದ್ರನೂ +ನಕ್ಷತ್ರವೂ=

ಸೂರ್ಯಚಂದ್ರನಕ್ಷತ್ರಗಳು

5.ಕರಿಯೂ+ತುರಗವೂ+ರಥಗಳು=

ಕರಿತುರಗರಥಗಳು

6.ಗುಡುಗೂ+ಸಿಡಿಲೂ+ಮಿಂಚೂ=

ಗುಡುಗುಸಿಡಿಲುಮಿಂಚುಗಳು

7.ಪಾರ್ಥನೂ+ಭೀಮನೂ=ಪಾರ್ಥಭೀಮರು

8.ಮಾದ್ರರೂ+ಮಾಗದರೂ+ಯಾದವರೂ=

ಮಾದ್ರಮಾಗಧಯಾದವರು

9.ಗಿರಿಯೂ+ವನವೂ+ದುರ್ಗಗಳು=

ಗಿರಿವನದುರ್ಗಗಳು

10.ರಾಮನೂ +ಲಕ್ಷ್ಮಣನೂ=ರಾಮಲಕ್ಷ್ಮಣರು.

# 6.ಬಹುವ್ರೀಹಿ ಸಮಾಸ

ಎರಡು ಅಥವಾ ಅನೇಕ ನಾಮಪದಗಳು ಸೇರಿ ಸಮಾಸವಾದಾಗ ಬೇರೊಂದು ಪದದ ಅರ್ಥ ಪ್ರಧಾನವಾಗಿರುವ ಸಮಾಸವೇ ಬಹುವ್ರೀಹಿ ಸಮಾಸ.

## ಉದಾಹರಣೆಗಳು

1.ನಾಣ್ ಇಲ್ಲದವನು ಯಾರೋ ಅವನೇ=
ನಾಣಿಲಿ.

2.ಮಹಿಗೆ ಪತಿಯು ಯಾರೋ ಅವನೇ=
ಮಹೀಪತಿ(ರಾಜ)

3.ನಾಲ್ಕು ಮೊಗ ಉಳ್ಳವನು ಆವನೋ ಅವನು=ನಾಲ್ಮೊಗ(ಬ್ರಹ್ಮ).

4.ಚಕ್ರವು ಪಾಣಿಯಲ್ಲಿ ಉಳ್ಳವನು ಆವನೋ ಅವನು =ಚಕ್ರಪಾಣಿ(ವಿಷ್ಣು)

5.ಫಾಲದಲ್ಲಿ ನೇತ್ರವುಳ್ಳವನು ಆವನೋ ಅವನು= ಫಾಲನೇತ್ರ(ಶಿವ)

6.ಮುರನ ವೈರಿಯು ಯಾರೋ ಅವನೇ=

ಮುರಾರಿ.

7.ರಾಜೀವದ ಸಖನು ಯಾರೋ ಅವನು=ರಾಜೀವ ಸಖ

8.ಧನುಜರ ರಿಪುವು ಆವನೋ ಅವನು=ಧನುಜರಿಪು.

9.ಇನನ ತನೂಜನು ಆವನೋ ಅವನು=ಇನತನೂಜ.

10.ಮೇದಿನಿಗೆ ಪತಿಯು ಆವನೋ ಅವನು=

ಮೇದಿನಿಪತಿ.

11.ಮೂರು ಕಣ್ಣು ಉಳ್ಳವನು ಆವನೋ ಅವನು

= ಮುಕ್ಕಣ್ಣ(ಶಿವ)

12.ಪದುಮವು ನಾಭಿಯಲ್ಲಿ ಆವನಿಗೋ

ಅವನು= ಪದುಮನಾಭ(ವಿಷ್ಣು)

13.ಹಣೆಯಲ್ಲಿ ಕಣ್ಣು ಉಳ್ಳವನು ಆವನೋ

ಅವನು=ಹಣೆಗಣ್ಣ.

14.ಅಂತಕನು ಆತ್ಮಜನು ಆವನೋ ಅವನು=

ಅಂತಕಾತ್ಮಜ(ಯಮ)

15.ದಿನಪನ ಸುತನು ಆವನೋ ಅವನು=

ದಿನಪಸುತ(ಕರ್ಣ).

# 7.ಕ್ರಿಯಾ ಸಮಾಸ

ಪೂರ್ವಪದವು ಹೆಚ್ಚಾಗಿ ದ್ವಿತೀಯ ವಿಭಕ್ತ್ಯಂತ ನಾಮಪದವಾಗಿದ್ದು ಉತ್ತರ ಪದವು ಕ್ರಿಯಾರೂಪದಿಂದ ಕೂಡಿರುವ ಸಮಾಸವೇ ಕ್ರಿಯಾಸಮಾಸ.

ಈ ಸಮಾಸಕ್ಕೆ ಅರಿಸಮಾಸ ದೋಷವಿಲ್ಲ.

## ಉದಾಹರಣೆಗಳು

1.ಮನೆಯನ್ನು +ಕಟ್ಟಿದನು=ಮನೆಕಟ್ಟಿದನು.

(ದ್ವಿತೀಯ ವಿಭಕ್ತಿಯಿಂದ ಕೂಡಿದ ನಾಮಪದ+ ಕ್ರಿಯಾರೂಪ ಪದ)

2.ಮೈಯನ್ನು + ಮರೆತು=ಮೈಮರೆತು

3.ಕೈಯಂ +ಪಿಡಿದು=ಕೈವಿಡಿದು.

4.ಮೈಯನ್ನು+ ತಡವಿ=ಮೈದಡವಿ

5.ಕಣ್ಣನ್ನು +ತೆರೆ=ಕಣ್ದೆರೆ

6.ಬಟ್ಟೆಯನ್ನು +ತೋರು=ಬಟ್ಟೆದೋರು.

7.ಮೈಯನ್ನು +ಮುಚ್ಚು=ಮೈಮುಚ್ಚು

8.ಕಣ್ಣಿನಿಂದ +ಕೆಡು=ಕಂಗೆಡು

9.ಕೈಯಂ+ಕೊಳ್ವುದು=ಕೈಕೊಳ್ವುದು

10.ಸಾಕ್ಷಿಯನ್ನು+ಮಾಡಿ=ಸಾಕ್ಷಿಮಾಡಿ

11.ಧನದ+ಹರಣ=ಧನಹರಣ

12.ಬಲದಿಂದ+ಬಂದು=ಬಲವಂದು

13.ಕೈಯನ್ನು +ಚಾಚು=ಕೈಚಾಚು

14.ಸ್ಥಾಪನೆಯನ್ನು+ಮಾಡು=ಸ್ಥಾಪನೆಮಾಡು.

15.ಮೈಯನ್ನು +ಮುರಿ=ಮೈಮುರಿ

## ೮.ಗಮಕ ಸಮಾಸ

ಪೂರ್ವಪದವು ಸರ್ವನಾಮ ಅಥವಾ ಕೃದಂತಗಳಲ್ಲಿ ಒಂದಾಗಿದ್ದು,ಉತ್ತರಪದ ನಾಮಪದವಾಗಿದ್ದು ಆಗುವ ಸಮಾಸವೇ ಗಮಕಸಮಾಸ.(ಅರಿಸಮಾಸ ದೋಷವಿಲ್ಲ).

### ಉದಾಹರಣೆಗಳು

1.ಅದು+ಮನೆ=ಆ ಮನೆ

2.ಇವನು+ಮನುಷ್ಯ=ಈ ಮನುಷ್ಯ

(ಸರ್ವನಾಮ+ನಾಮಪದ)

3.ಅವನು+ಹುಡುಗ=ಆಹುಡುಗ

4.ಅದು +ಕಲ್ಲು=ಆ ಕಲ್ಲು

5.ಇವಳು+ಮುದುಕಿ=ಈ ಮುದುಕಿ

6.ಇದು+ಬೆಕ್ಕು=ಈ ಬೆಕ್ಕು

7.ಮಾಡಿದುದು+ಅಡುಗೆ=ಮಾಡಿದಡುಗೆ

(ಕೃದಂತ+ನಾಮಪದ)

8.ತಿಂದುದು+ಕೂಳು=ತಿಂದಕೂಳು

9.ಸಿಡಿದುದು +ಮದ್ದು=ಸಿಡಿಮದ್ದು

10.ನೆಯ್ದುದು+ವಸ್ತ್ರ=ನೆಯ್ದವಸ್ತ್ರ

11.ಬೆಂದುದು+ ಬೇಳೆ=ಬೆಂದಬೇಳೆ


ರಚನೆ:

ನಾಗರಾಜಪ್ಪ.ಪಿ

ಕನ್ನಡ ಭಾಷಾ ಸಹಶಿಕ್ಷಕರು

ಸರ್ಕಾರಿ ಪ್ರೌಢಶಾಲೆ ಕಟ್ಟೆಹಕ್ಕಲು

ತೀರ್ಥಹಳ್ಳಿ ತಾಲ್ಲೂಕು ಶಿವಮೊಗ್ಗ ಜಿಲ್ಲೆ.